# ಕರ್ನಾಟಕ ವಿಧಾನ ಪರಿಷತ್ತು
## (ಗಮನ ಸೆಳೆಯುವ ಸೂಚನೆ -ನಿಯಮ 330ರಡಿ)

**ಶ್ರೀ ಮಂಜುನಾಥ ಭಂಡಾರಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರು ಗಮನ ಸೆಳೆಯುವ ಸೂಚನೆ (ನಿಯಮ 330) ರ ಅಡಿಯಲ್ಲಿಕರ್ನಾಟಕ ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಡಿಯಲ್ಲಿ ಮಹಿಳೆ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ದಿಗಾಗಿ ಮಾತೃಪೂರ್ಣ ಯೋಜನೆ, ವಿಶೇಷ ನವಜಾತ ಶಿಶು ಆರೈಕೆ ಘಟಕ, ನವಜಾತ ಶಿಶು ಸ್ಥಿರೀಕರಣ ಘಟಕ, ನವಜಾತ ಶಿಶು ಆರೋಗ್ಯ ಕೇಂದ್ರ, ಗೃಹ ಆಧಾರಿತ ಶಿಶು ಆರೈಕೆ ಕಾರ್ಯಕ್ರಮ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಹೀಗೆ ಹಲವು ಯೋಜನೆಗಳು ಜಾರಿಯಲ್ಲಿವೆ.**

**ಇಷ್ಟೆಲ್ಲ ಕಾರ್ಯಕ್ರಮಗಳು ಜಾರಿಯಲ್ಲಿದ್ದರು ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಅತಿ ಹೆಚ್ಚು ತಾಯಂದಿರ ಮರಣ ಪ್ರಮಾಣ ದಾಖಲಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ ಕರ್ನಾಟಕದಲ್ಲಿ 15 ರಿಂದ 18 ವರ್ಷದೊಳಗೆ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಪ್ರಮಾಣ ನಗರ ಪ್ರದೇಶದಲ್ಲಿ 3.4% ರಷ್ಟು ಗ್ರಾಮೀಣ ಪ್ರದೇಶದಲ್ಲಿ 6.6 ರಷ್ಟು ಇದು ಎಂದು ವರದಿಯಾಗಿದೆ. ತಳಮಟ್ಟದಲ್ಲಿ ಯೋಜನೆಗಳ ಅನುಷ್ಠಾನದಲ್ಲಿರುವ ತೊಡಕುಗಳು ಹಾಗೂ ಪಾದೇಶಿಕ ಭಿನ್ನತೆಗಳು ಇಂದು ಸವಾಲಾಗಿ ಪರಿಣಮಿಸಿರುವ ಅಂಶಗಳಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:**

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಲ್ಲಿ ಕೈಗೊಂಡಿರುವ ಕ್ರಮದ ವಿವರಣೆ:-

2004-06ರಲ್ಲಿ ತಾಯಿ ಮರಣ ಪ್ರಮಾಣವು 213 ಇದ್ದು ಇತ್ತೀಚಿನ 2018-20 SRS ಸಮೀಕ್ಷೆ ವರದಿಯಲ್ಲಿ ಇಳಿಮುಖವಾಗಿರುತ್ತದೆ. ಕಳೆದ 15 ವರ್ಷಗಳಲ್ಲಿ ಶೇ.67 ರಷ್ಟು ತಾಯಿ ಮರಣಗಳು ತಡೆಗಟ್ಟಲಾಗಿದೆ. ಕರ್ನಾಟಕ ರಾಜ್ಯದಲ್ಲಿ ತಾಯಿ ಮರಣವನ್ನು 213 ರಿಂದ 69ಕ್ಕೆ ಇಳಿಸಲು (1)ಜನನಿ ಸುರಕ್ಷಾ ಯೋಜನೆ(JSY), (2)ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK), (3) ಲಕ್ಷ್ಯಕಾರ್ಯಕ್ರಮದ ಅನುಷ್ಠಾನ, (4)ಪ್ರಸೂತಿ ತೀವ್ರನಿಗಾಘಟಕಗಳು, (5)ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ,(6) FRUsಗಳ ಬಲಪಡಿಸುವಿಕೆ ಯೋಜನೆಗಳು ಅನುಷ್ಠಾನಗೊಂಡಿರುತ್ತವೆ. ತಾಯಿ ಮರಣವನ್ನುಇನ್ನೂ ಹೆಚ್ಚುಪರಿಣಾಮಕಾರಿಯಾಗಿ ತಡೆಗಟ್ಟಲು (1) ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (PMSMA),(2) ವಿಸ್ತೃತ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (e-PMSMA),(3) Midwifery ಉಪಕ್ರಮ ಈ ಕಾರ್ಯಕ್ರಮಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೈಗೊಳ್ಳಲಾಗುತ್ತಿದೆ (ವಿವರಗಳು **ಅನುಬಂಧ -1ರಲ್ಲಿ** ನೀಡಲಾಗಿದೆ) ಹಾಗೂ ಬಾಲ್ಯ ವಿವಾಹ ಮತ್ತು ಅಪ್ರಾಪ್ತ ಗರ್ಭಧಾರಣೆ ಮತ್ತು ಮಾತೃ ಪೂರ್ಣ ಯೋಜನೆ (ಪೌಷ್ಠಿಕಾಶದ ಕೊರತೆ) ಈ ಕಾರ್ಯಕ್ರಮಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕೈಗೊಳ್ಳಲಾಗುತ್ತಿದೆ (ವಿವರಗಳು **ಅನುಬಂಧ -2**ರಲ್ಲಿ ನೀಡಲಾಗಿದೆ).

ಕರ್ನಾಟಕ ರಾಜ್ಯದ ತಾಯಿ ಮರಣ ಪ್ರಮಾಣವು ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ ಹೆಚ್ಚಾಗಿರುವುದು ಗರ್ಭಿಣಿ ಆರೋಗ್ಯದ ಅಂಶಗಳಾದ ಅನಿಮೀಯ, ಅಧಿಕರಕ್ತದ ಒತ್ತಡ & ಅಪೂರ್ಣ ಗರ್ಭಿಣಿ ಆರೈಕೆ, ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ಶೇಕಡ.100ರಷ್ಟು ಆಗದಿರುವುದು, ಅತೀವ ರಕ್ತಸ್ರಾವ & ಹೆರಿಗೆ ಸಮಯದ ಸೋಂಕು ಇರುವುದು. ಇತರೆ ಅಂಶಗಳಾದ ಬಾಲ್ಯವಿವಾಹ ಮತ್ತು ಅಪ್ರಾಪ್ತಗರ್ಭದಾರಣೆ, ಪೌಷ್ಠಕಾಂಶದ ಕೊರತೆ, ಗರ್ಭಿಣಿಯರಿಗೆ ಸರಿಯಾದ ಸಮಯದಲ್ಲಿ ಮತ್ತು ಪೂರ್ಣಪ್ರಮಾಣದ ಆರೈಕೆಗೆ ಕುಟುಂಬವು ಪ್ರಾಶಸ್ತ್ಯತೆಯನ್ನು ನೀಡದೇ ಇರುವ ಕಾರಣಗಳಿಂದ ತಾಯಿ ಮರಣ ಪ್ರಮಾಣಕ್ಕೆ ದುಷ್ಪರಿಣಾಮಗಳು ಕಂಡುಬಂದಿರುತ್ತವೆ.

ತಾಯಿ ಮರಣವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ರಕ್ತಹೀನತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ ಮಾಧ್ಯಮಿಕ ಅಂದರೆ Hb% 10 ಗ್ರಾಂ ಗಿಂತ ಕೆಳಗಡೆ ಇರುವ ಎಲ್ಲಾ ಗರ್ಭಿಣಿ ಬಾಣಂತಿಯರಿಗೂ ನೀಡಲಾಗುತ್ತಿದೆ. ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವಅಭಿಯಾನ (PMSMA), ವಿಸ್ತೃತ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (e-PMSMA), Midwifery ಉಪಕ್ರಮ, ಕೆಳಹಂತದ ಆಸ್ಪತ್ರೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಇನ್ನೂಹೆಚ್ಚಿನ ಪರಿಣಾಮಕಾರಿಯಾಗಿ 24x7 ಹೆರಿಗೆಗಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಕೆಳಹಂತದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು & ಸಿಬ್ಬಂದಿಗಳಿಗೆ ಕೌಶಲ್ಯ ಆಧಾರಿತ ದಕ್ಷತಾ ಹಾಗು ದಕ್ಷ ತರಬೇತಿಯನ್ನು ನೀಡಲಾಗುತ್ತಿದ್ದು, ಪುನರ್ಮನನ ತರಬೇತಿಯನ್ನು ನೀಡಲಾಗುತ್ತಿದೆ. ಕೆಳಹಂತದ ಆಸ್ಪತ್ರೆಗಳ ಕಾರ್ಯನಿರ್ವಾಹಣಾ ಅಂಶಗಳಾದ ಮಾಸಿಕ ಹೆರಿಗೆಗಳು, ಗುಣಮಟ್ಟ ಗರ್ಭಿಣಿ ಬಾಣಂತಿಯರ ಆರೈಕೆ ಮುಂತಾದವುಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ. ಕೆಳಹಂತದ ಆಸ್ಪತ್ರೆಗಳ referral (ಶಿಫಾರಸ್ಸು) ಪ್ರತಿ ತಿಂಗಳು ಮೇಲ್ವಿಚಾರಣೆ ಮಾಡಲಾಗುತ್ತಿದೆ. ಪ್ರತಿ ಒಂದು ತಾಯಿ ಮರಣವನ್ನು ಕಟ್ಟು ನಿಟ್ಟಾಗಿ Auditಗಳನ್ನು ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದ್ದು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಮಾಡಲಾಗುವುದು.

ಪ್ರಸ್ತುತ ತಾಯಿ ಮರಣ ಪ್ರಮಾಣವು 2018-20ರ ಸಮೀಕ್ಷಾವರದಿಯಂತೆ 69 ಇದ್ದು 2025ರ ಒಳಗೆ ಇನ್ನಷ್ಟು ಕಡಿಮೆಗೊಳಿಸಲು ಇಲಾಖೆಗಳು ಕಾರ್ಯಕ್ರಮಗಳನ್ನು ಇನ್ನು ಹೆಚ್ಚಿನ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು.

**ಸಂಖ್ಯೆ: ಆಕುಕ 48 ಎಸ್.ಟಿ.ಕ್ಯೂ 2023**

**(ಶ್ರೀ ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಅನುಬಂಧ-1

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವರ:

A. ದಕ್ಷಿಣ ಭಾರತ ರಾಜ್ಯಗಳ ತಾಯಿ ಮರಣ ಪ್ರಮಾಣವು ಕೆಳಗಿನ ಕೋಷ್ಟಕದಂತೆ ಇತ್ತೀಚಿನ (2018-20 ) SRS ಸಮೀಕ್ಷೆಯ ವರದಿ:

| Sl.No | India /States | 2015-17 (a) | 2016-18 (b) | 2017-19 (c) | 2018-20 (d) | Decline (c-d) |
|---|---|---|---|---|---|---|
| 1 | **Karnataka** | **97** | **92** | **83** | **69** | **14** |
| 2 | Kerala | 42 | 43 | 30 | 19 | 11 |
| 3 | Telangana | 76 | 63 | 56 | 43 | 13 |
| 4 | Andhra Pradesh | 74 | 65 | 58 | 45 | 13 |
| 5 | Tamil Nadu | 63 | 60 | 58 | 54 | 4 |

B. ಕರ್ನಾಟಕ ರಾಜ್ಯದಲ್ಲಿ ತಾಯಿ ಮರಣವನ್ನು 213 ರಿಂದ 69 ಕ್ಕೆ ಇಳಿಸಲು ಕೆಳಕಂಡ ಯೋಜನೆಗಳು ಅನುಷ್ಠಾನಗೊಂಡಿರುತ್ತವೆ:

### 1.ಜನನಿ ಸುರಕ್ಷಾಯೋಜನೆ(JSY):

ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ ಮಾಡಿಸಿ ಕೊಂಡಿದ್ದಲ್ಲಿ **BPL**ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಹೆರಿಗೆಯಾದ ಕೂಡಲೇ **ರೂ.600/700**ಗಳನ್ನು ನೇರ ನಗದು ವರ್ಗಾವಣೆ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ನೀಡಲಾಗುತ್ತಿದೆ. ಈ ಯೋಜನೆಯಿಂದ ಸಾಂಸ್ಥಿಕ ಹೆರಿಗೆಗಳಿಗೆ ಉತ್ತೇಜನ ನೀಡಿ ತಾಯಿ ಮರಣವನ್ನು ಕಡಿಮೆ ಮಾಡಲು ಸಹಾಯಕವಾಗಿರುತ್ತದೆ.

### 2.ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK):

ಜನನಿ ಶಿಶುಸುರಕ್ಷಾಕಾರ್ಯಕ್ರಮ(JSSK) ಕಾರ್ಯಕ್ರಮ ಈ ಯೋಜನೆಯಡಿಲ್ಲಿ ಕೆಳಕಂಡ 5 ಉಪಯುಕ್ತ components ಗಳು **ಎಲ್ಲಾವರ್ಗದ** ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿರುತ್ತವೆ.

1. ಉಚಿತಊಟ
2. ಉಚಿತರಕ್ತದಬಾಟಲಿ
3. ಉಚಿತಔಷಧಿ ಮತ್ತು consumables.
4. ಉಚಿತಸಾರಿಗೆ.
5. ಉಚಿತ ಪ್ರಯೋಗಾಲಯ ಪರೀಕ್ಷೆಗಳು

### 3.ಲಕ್ಷ್ಯ ಕಾರ್ಯಕ್ರಮದ ಅನುಷ್ಠಾನ:

ಲಕ್ಷಕಾರ್ಯಕ್ರಮ ರಾಜ್ಯದ ಸಾರ್ವತ್ರಿಕ ಹೆರಿಗೆ ಆಸ್ಪತ್ರೆಯಲ್ಲಿ ಗುಣಮಟ್ಟದ ಹೆರಿಗೆ ಸೇವೆಗಳನ್ನು ಮತ್ತು ನವಜಾತ ಶಿಶು ಸೇವೆಗಳನ್ನು ನೀಡಿ ತಾಯಿ ಮರಣ & ನವಜಾತ ಶಿಶು ಮರಣವನ್ನು ಕಡಿಮೆ ಮಾಡುವ ಉದ್ದೇಶದಿಂದ ರಾಜ್ಯ ದ 125 ಹೆರಿಗೆ ಆಸ್ಪತ್ರೆಗಳಲ್ಲಿ ಕಾರ್ಯಕ್ರಮವು ಅನುಷ್ಠಾನಗೊಂಡು ತಾಯಿ ಮರಣವನ್ನು ಕಡಿಮೆ ಮಾಡಲು ಅನುಕೂಲವಾಗುತ್ತಿದೆ. ಇದುವರೆಗೂ 111 ಹೆರಿಗೆ ಆಸ್ಪತ್ರೆಗಳು ಲಕ್ಷ್ಯಕಾರ್ಯಕ್ರಮದಡಿಯಲ್ಲಿ certificationಸಾಧಿಸಿರುತ್ತವೆ.

**4.ಪ್ರಸೂತಿ ತೀವ್ರನಿಗಾಘಟಕಗಳು:**

ರಾಜ್ಯದ 18 ಜಿಲಾ ಆಸ್ಪತ್ರೆಗಳಲ್ಲಿ ಪ್ರಸೂತಿ ತೀವ್ರನಿಗಾಘಟಕಗಳನ್ನು ಸ್ಥಾಪಿಸಲಾಗಿದ್ದು,ಇದರಿಂದ ಗರ್ಭಾವಸ್ಥೆ ಮತ್ತು ಪ್ರಸೂತಿಯಿಂದ ಉಂಟಾಗುವ ಮಾರಣಾಂತಿಕ ತೊಡುಕುಗಳನ್ನು ನಿವಾರಿಸಲು ಹಾಗೂ ರೋಗಿಯನ್ನುಉಳಿಸಲು ಸಹಾಯವಾಗುತ್ತಿದೆ.

**5.ತಾಯಿ ಮತ್ತುಮಕ್ಕಳಆಸ್ಪತ್ರೆಗಳನಿರ್ಮಾಣ:**

ಇದುವರೆಗೂ 45 ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ನಿರ್ಮಿಸಲಾಗಿದ್ದು ಇದರಿಂದ ಗರ್ಭಿಣಿ & ಬಾಣಂತಿಯರಿಗೆ ಆರೈಕೆಯ ಪ್ರಾಶಸ್ತ್ಯವನ್ನುನೀಡಲಾಗುತಿದೆ.

**6.FRUsಗಳಬಲಪಡಿಸುವಿಕೆ:**

ರಾಜ್ಯದ 289 ಪ್ರಥಮ ಶಿಫಾರಸ್ಸು ಘಟಕಗಳನ್ನು ಅಗತ್ಯ ಮಾನವಸಂಪನ್ಮೂಲ, ಉಪಕರಣ ಮತ್ತು ತರಬೇತಿಯನ್ನುನೀಡಿ 24/7 ಸಮಗ್ರ ಮಾತೃಆರೈಕೆಯನ್ನು ನೀಡಲು ಅನುಕೂಲವಾಗುತ್ತದೆ.

C. <u>ತಾಯಿಮರಣವನ್ನುಇನ್ನೂಹೆಚ್ಚುಪರಿಣಾಮಕಾರಿಯಾಗಿತಡೆಗಟ್ಟಲು ಕೆಳಕಂಡಕ್ರಮಗಳನ್ನುಕೈಗೊಳ್ಳಲಾಗುತ್ತಿದೆ:</u>

**1.ಪ್ರಧಾನ ಮಂತ್ರಿಸುರಕ್ಷಿತಮಾತೃತ್ವಅಭಿಯಾನ:**

ಪ್ರತಿ ತಿಂಗಳು 9ನೇ ತಾರೀಖಿನಂದು ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (PMSMA) ಕಾರ್ಯಕ್ರಮವನ್ನು ರಾಜ್ಯದ 2122 ಆರೋಗ್ಯ ಸಂಸ್ಥೆಯಲ್ಲಿ ನಡೆಸಲಾಗುತ್ತಿದೆ ಈ ದಿನದಂದು ವಿಶೇಷವಾಗಿ ಗರ್ಭಿಣಿಯರಿಗೆ ಗುಣಮಟ್ಟದತ ಪಾಸಣೆಯನ್ನು ನುರಿತ ತಜ್ಞರಿಂದ ನಡೆಸಲಾಗುತ್ತದೆ. ಈ ದಿನದಂದು ಆರೈಕೆಯ ಜೊತೆ ಪೌಷ್ಟಿಕಾಂಶದ ಆಪ್ತಸಮಲೋಚನೆ, Birth planning ಇತ್ಯಾದಿ ಸೇವೆಗಳನ್ನು ನೀಡಲಾಗುತ್ತಿದೆ. ಈ ದಿನದಂದು ಖಾಸಗಿವಲಯದ ತಜ್ಞರು ಇಲಾಖೆ ಜೊತೆ ಕೈಜೋಡಿಸಿ ಮಾಡಲಾಗುತ್ತಿದೆ.

**2. ವಿಸ್ತೃತಪ್ರಧಾನಮಂತ್ರಿಸುರಕ್ಷಿತಮಾತೃತ್ವಅಭಿಯಾನ (e-PMSMA):**

ಪ್ರತಿತಿಂಗಳು 24ನೇ ತಾರೀಖಿನಂದು ವಿಸ್ತೃತ ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (e-PMSMA) ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು ತೊಡಕಿ ಗರ್ಭಧಾರಣೆಗಳನ್ನು ವಿಶೇಷವಾಗಿ ಆರೈಕೆ ಮಾಡಲಾಗುತ್ತಿದೆ. ಇದರಿಂದ ತೊಡಕುಗಳು ನಿವಾರಣೆಗೊಂಡು ತಾಯಿ ಮರಣವನ್ನು ತಡೆಗಟ್ಟಲು ಅನುಕೂಲವಾಗುತ್ತದೆ.

**3.Midwifery initiative :**

ಗೌರವಯುತ ಮಾತೃ ಆರೈಕೆಯನ್ನುನೀಡಲು, ಹೆಚ್ಚು ಸಹಜ ಹೆರಿಗೆಗಳನ್ನು ಉತ್ತೇಜಿಸಲು ಹಾಗೂ ಸಿಜೇರಿಯನ್ ಪ್ರಮಾಣವನ್ನು ಅತ್ಯುತ್ತಮವಾಗಿಸಲು ಯೋಜನೆಯನ್ನು ಇದೀಗ ಅನುಷ್ಠಾನಗೊಳಿಸದೆ.

(ಬಿ.ಎಸ್.ರವಿಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ-4
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## ಅನುಬಂಧ-2

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವರ:

### 1.ಮಾತೃಪೂರ್ಣ ಯೋಜನೆ:-

- ಮಾತೃಪೂರ್ಣ ಯೋಜನೆಯನ್ನು 2017 ಅಕ್ಟೋಬರ್ 2ನೇ ತಾರೀಖಿನಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡಲಾಗುತ್ತದೆ.
- ಊಟದ ಮೆನು: ಅನ್ನ, ಸಾಂಬಾರ್, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, 200 ಎಂ.ಎಲ್ ಹಾಲು ಮತ್ತು ಶೇಂಗಾ ಚಿಕ್ಕಿಯನ್ನು ತಿಂಗಳಿಗೆ ಕನಿಷ್ಠ 25 ದಿನಗಳು ನೀಡಲಾಗುವುದು. (ಜಿಲ್ಲಾ ಮೇಲ್ವಿಚಾರಣಾ ಸಮಿತಿಯಲ್ಲಿ ಮೆನು ಬದಲಾವಣೆಗೆ ಅವಕಾಶವಿರುತ್ತದೆ.)
- ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.21/-ರ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.
- 1342 ಕ್ಯಾಲೋರಿ, 41 ಗ್ರಾಂ ಪ್ರೋಟೀನ್ ಮತ್ತು 578 mg ಕ್ಯಾಲ್ಸಿಯಂ ಒಳಗೊಂಡ ಬಿಸಿಯೂಟ ನೀಡಲಾಗುತ್ತಿದೆ.
- ಮೇ-2023 ರ ಅಂತ್ಯಕ್ಕೆ 363509 ಗರ್ಭಿಣಿಯರು ಮತ್ತು 357199 ಬಾಣಂತಿ ಮಹಿಳೆಯರು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.
- ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಸೀಮಿತಗೊಳಿಸಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಬಿಸಿಯೂಟವನ್ನು ಅಂಗನವಾಡಿ ಕೇಂದ್ರಗಳಲ್ಲಿ ತಯಾರಿಸಿ ನೀಡುವ ಬದಲು ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ ಫಲಾನುಭವಿಗಳಿಗೆ ಆಹಾರ ಸಾಮಗ್ರಿಗಳನ್ನು 15 ದಿನಗಳಿಗೊಮ್ಮೆ ಯೋಜನೆಯ ಘಟಕ ವೆಚ್ಚ ರೂ.21/- ಗಳಂತೆ (ವಿತರಣೆ ಹಾಗೂ ಇತರೆ ವೆಚ್ಚಗಳು ಸೇರಿ) ಮನೆಗೆ ವಿತರಿಸಲು ಅವಕಾಶ ನೀಡಲಾಗಿರುತ್ತದೆ.

### 2. ಬಾಲ್ಯವಿವಾಹ ನಿಷೇಧ ಕೋಶ:

ಬಾಲ್ಯವಿವಾಹ ನಿಷೇಧ ಕಾಯ್ದೆ-2006, ಕೇಂದ್ರದ ಕಾಯ್ದೆಯಾಗಿದ್ದು, ಸದರಿ ಕಾಯ್ದೆಯನ್ನು ರಾಜ್ಯದಲ್ಲಿ ದಿನಾಂಕ:10-01-2007 ರಿಂದ ಜಾರಿಗೆ ತರಲಾಗಿದೆ. ಬಾಲ್ಯವಿವಾಹವನ್ನು ತಡೆಯುವ ನಿಟ್ಟಿನಲ್ಲಿ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಜಸ್ಟಿಸ್ ಶಿವರಾಜ್ ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯದಲ್ಲಿ ಪ್ರತ್ಯೇಕವಾಗಿ ಬಾಲ್ಯವಿವಾಹ ನಿಷೇಧ ಕೋಶವನ್ನು ದಿನಾಂಕ:16-11-2011 ರಂದು ಪ್ರಾರಂಭಿಸಲಾಗಿದೆ. ಕೋಶದ ಮೂಲಕ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಾವಳಿಗಳು-2014ನ್ನು ದಿನಾಂಕ: 21.10.2015 ರಿಂದ ಜಾರಿಗೊಳಿಸಲಾಗುತ್ತಿದೆ.

- 2016 ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006ಕ್ಕೆ ಕರ್ನಾಟಕ ಸರ್ಕಾರವು ತಿದ್ದುಪಡಿ ತಂದಿದ್ದು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016, ದಿ:03-03-2018 ರಿಂದ ಜಾರಿಗೆ ಬಂದಿರುತ್ತದೆ. ತಿದ್ದುಪಡಿ ಕಾಯ್ದೆಯ ಪ್ರಮುಖ ಅಂಶಗಳು:

1. ದಿನಾಂಕ 03-03-2018 ರಿಂದ ನೆರವೇರಿಸಲಾದ ಪ್ರತಿಯೊಂದು ಬಾಲ್ಯ ವಿವಾಹವು ಪ್ರಾರಂಭದಿಂದಲೇ ಅನೂರ್ಜಿತವಾಗತಕ್ಕದ್ದು.

2. "ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೇಯತೆಯನ್ನು ಗಮನಿಸಿ ಈ ಅಧಿನಿಯಮದಡಿ, ತಾನಾಗಿಯೇ ಕ್ರಮ ತೆಗೆದುಕೊಳ್ಳತಕ್ಕದ್ದು".

3. ಈ ಕಾಯ್ದೆಯಡಿ ಮಹಿಳೆಯರೂ ಕೂಡ ಕಾರವಾಸದ ಶಿಕ್ಷೆಗೆ ಅರ್ಹರಾಗಿರುತ್ತಾರೆ.

4. ಈ ತಿದ್ದುಪಡಿ ಪ್ರಕಾರ ಸೆಕ್ಷನ್ 9 ಮತ್ತು 13 ರ ಪ್ರಕಾರ ತಪ್ಪಿತಸ್ಥ ವಯಸ್ಕ ಪತಿ, ತಡೆಯಾಜ್ಞೆ ಉಲ್ಲಂಘಿಸಿದವರು ಕನಿಷ್ಠ ಒಂದು ವರ್ಷ ಆದರೆ ಎರಡು ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆ ಅಥವಾ ಇವೆರಡರಿಂದಲೂ ಶಿಕ್ಷೆಗೆ ಗುರಿಯಾಗುವರು.

5. ಈ ತಿದ್ದುಪಡಿ ಪ್ರಕಾರ ಸೆಕ್ಷನ್ 10 & 11ರ ಪ್ರಕಾರ ಬಾಲ್ಯವಿವಾಹ ನಡೆಸಿದ ಮತ್ತು ಉತ್ತೇಜಿಸಿದ ತಪ್ಪಿತಸ್ಥರು ಕನಿಷ್ಠ 1 ವರ್ಷದಿಂದ ಗರಿಷ್ಠ 2 ವರ್ಷಗಳವರೆಗೆ ಕಾರಾವಾಸ ಮತ್ತು 1 ಲಕ್ಷ ರೂ ವರೆಗೆ ದಂಡದ ಶಿಕ್ಷೆಗೆ ಗುರಿಯಾಗುವರು.

➢ ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಾವಳಿಗಳು-2014ನ್ನು ಪರಿಷ್ಕರಣೆ ಮಾಡಲು ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು ರವರ ಸಹಯೋಗದೊಂದಿಗೆ (NLSIU) ಕ್ರಮ ಕೈಗೊಳ್ಳಲಾಗುತ್ತಿದೆ.

**3. ಕಳೆದ 3 ವರ್ಷ ಬಾಲ್ಯ ವಿವಾಹ ಪ್ರಕರಣಗಳ ವಿವರ.**

| ಕ್ರಂ ಸಂ | ವರ್ಷ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್.ಐ.ಆರ್ ದಾಖಲಾದ ಸಂಖ್ಯೆ | ಶೇಕಡಾವಾರು |
|---|---|---|---|---|---|---|
| 1 | 2020-21 | 3007 | 2711 | 296 | 239 | 81% |
| 2 | 2021-22 | 2819 | 2401 | 418 | 389 | 93% |
| 3 | 2022-23 | 2522 | 2194 | 328 | 327 | 99% |

**4. NHFS ವರದಿ:-**

| ಕ್ರ ಸಂ | ಸೂಚ್ಯಂಕ | | NFHS-5 (2019-20) | | | NFHS-4 (2015-16) |
|---|---|---|---|---|---|---|
| | | | ನಗರ | ಗ್ರಾಮೀಣ | ಒಟ್ಟು | |
| 1 | 18 ವರ್ಷ ದ ಮೊದಲು ವಿವಾಹವಾದ 20 -24 ವಯೋಮಾನದ ಹೆಣ್ಣುಮಕ್ಕಳು | ಭಾರತ | **14.7** | **27.0** | **23.3** | **26.8** |
| | | ಕರ್ನಾಟಕ | **16.1** | **24.7** | **21.3** | **21.4** |
| 2 | ಸಮೀಕ್ಷೆಯ ವೇಳೆಯಲ್ಲಿ ತಾಯಂದಿರು / ಗರ್ಭವತಿಯಾಗಿದ್ದ 15-19 ವಯೋಮಾನದ ಹೆಣ್ಣು ಮಕ್ಕಳು | ಭಾರತ | **3.8** | **7.9** | **6.8** | **7.9** |
| | | ಕರ್ನಾಟಕ | **3.4** | **6.6** | **5.4** | **7.8** |

5. **ಬಾಲ್ಯವಿವಾಹ ನಿಷೇಧ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.**

- ಸರ್ಕಾರದ ಅಧಿಸೂಚನೆ ದಿನಾಂಕ:28-05-2018 ರನ್ವಯ ಶಿಕ್ಷಣ, ಪಂಚಾಯತ್ ರಾಜ್, ಕಂದಾಯ, ಪೊಲೀಸ್, ಸಮಾಜ ಕಲ್ಯಾಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನೊಳಗೊಂಡಂತೆ ರಾಜ್ಯಾದ್ಯಂತ ಸುಮಾರು 58522 ಅಧಿಕಾರಿಗಳನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಲಾಗಿದೆ. ನಗರ ಪಾಲಿಕೆ/ ಮುನಿಸಿಪಾಲ್ ಕಾರ್ಪೋರೇಷನ್/ ಪಟ್ಟಣ ಪಂಚಾಯಿತಿ ಗಳಲ್ಲಿ ಕಂದಾಯ ನಿರೀಕ್ಷಕರು ಬಾಲ್ಯವಿವಾಹ ನಿಷೇಧಾಧಿಕಾರಿಗಳಾಗಿರುತ್ತಾರೆ.

- 2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಭಾಗೀದಾರ ಇಲಾಖೆಗಳ ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ ಅವರ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗಿರುವ ಕ್ರಮಬದ್ಧ ಕಾರ್ಯಾವಿಧಾನ (SOP) ಕುರಿತಂತೆ ತರಬೇತಿಗಾಗಿ ಪ್ರತಿ ಜಿಲ್ಲೆಗೆ ರೂ. 50,000/-ಗಳಂತೆ ಒಟ್ಟು ರೂ. 15,50,000/- ಅನುದಾನವನ್ನು 31 ಜಿಲ್ಲೆಗಳಿಗೆ ಬಿಡುಗಡೆ ಮಾಡಿ ತರಬೇತಿ ಹಮ್ಮಿಕೊಳ್ಳಲಾಗಿದೆ.

- 2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಯುವಜನಾಂಗದಲ್ಲಿ ಅರಿವು ಮೂಡಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಯುವ ಮೇಳ ಹಾಗೂ ಇತರೆ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯದ 4 ವಿಭಾಗಗಳಲ್ಲಿನ ಬೆಳಗಾವಿ, ಚಾಮರಾಜನಗರ, ಯಾದಗಿರಿ ಮತ್ತು ತುಮಕೂರು ಜಿಲ್ಲೆಗಳಿಗೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 20.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವುದರೊಂದಿಗೆ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

- **ಸುರಕ್ಷಿಣಿ**:- ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ, ಬಾಲ್ಯ ವಿವಾಹದಿಂದ ಹೆಣ್ಣು ಮಕ್ಕಳ ರಕ್ಷಣೆ ಹಾಗೂ ಅನುಸರಣೆಗಾಗಿ ಸುರಕ್ಷಿಣಿ ಎಂಬ ವೆಬ್ ಪೋರ್ಟಲ್ ನ್ನು NIC ಸಹಯೋಗದಿಂದ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ವೆಬ್ ಪೋರ್ಟಲ್ ನ್ನು ದಿನಾಂಕ:06.03.2023ರಿಂದ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

- **ಸ್ಪೂರ್ತಿ ಯೋಜನೆ**:- ಬಾಲ್ಯವಿವಾಹವನ್ನು ತಡೆಗಟ್ಟುವುದು, ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯ ಸುಧಾರಣೆ, ಮಕ್ಕಳು ಶಾಲೆ ಬಿಡುವಿಕೆಯ ಪ್ರಮಾಣ ಕಡಿಮೆ ಮಾಡುವುದು ಹಾಗೂ ಹದಿಹರೆಯದ ಹೆಣ್ಣು ಮಕ್ಕಳ ಪೌಷ್ಠಿಕಾಂಶ ಪ್ರಮಾಣವನ್ನು ಹೆಚ್ಚು ಮಾಡಿ ಅವರ ಆರೋಗ್ಯವನ್ನು ಸದೃಡಗೊಳಿಸುವ ಉದ್ದೇಶಗಳಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಸ್ಪೂರ್ತಿ ಯೋಜನೆಯನ್ನು ರಾಜ್ಯದ ಇತರೆ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ 11 ತಾಲ್ಲೂಕು(ಹುನಗುಂದ, ಸವದತ್ತಿ, ಗೋಕಾಕ್, ಹುಕ್ಕೇರಿ, ಚಿಂಚೋಳಿ, ಜೇವರ್ಗಿ, ಲಿಂಗಸುಗೂರು, ದೇವದುರ್ಗ , ಮುದ್ದೇಬಿಹಾಳ, ಇಂಡಿ) ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

SLW030
10/07/2023

6. **ಇಲಾಖೆಯಿಂದ ಕೈಗೊಳ್ಳುತ್ತಿರುವ ಇನ್ನಿತರೆ ಕಾರ್ಯಕ್ರಮಗಳು**

- **ಭೇಟಿ ಬಚಾವ್‌ಭೇಟಿ ಪಡಾವೋ:-** ಈ ಯೋಜನೆಯನ್ನು ರಾಜ್ಯದ 31 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.
-
- **ಭಾಗ್ಯಲಕ್ಷ್ಮೀ-ಸುಕನ್ಯ ಸಮೃದ್ಧಿ:-** ಈ ಯೋಜನೆಯಡಿ 2006 ರಿಂದ ಇದುವರೆವಿಗೂ ಸುಮಾರು 33 ಲಕ್ಷ ಹೆಣ್ಣು ಮಕ್ಕಳನ್ನು ನೋಂದಾಯಿಸಲಾಗಿದೆ.

- ಸರ್ಕಾರದ ಅಪರ ಕಾರ್ಯದರ್ಶಿಗಳು ಇವರ ಆದೇಶದ ಮೇರೆಗೆ ನಿರ್ದೇಶಕರು, ಪಂಚಾಯತ್‌ರಾಜ್ ಆಯುಕ್ತಾಲಯ ಇವರು ಕೋರಿರುವಂತೆ, ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರುಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಸೇರ್ಪಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

(ಬಿ.ಎಸ್.ರವಿಕುಮಾರ್)
**ಸರ್ಕಾರದ ಉಪ ಕಾರ್ಯದರ್ಶಿ-4**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**